ಮೈಸೂರ ಗೆಜಿಟ್.

ಸಂ. 44.] ಸರ್ಕಾರದಿಂದ ಪ್ರಾಯುಷ್ ಉದ್ದು. [ಸಂ 36.

ಬೆಂಗಳೂರು, ಗುರುವಾರ, ಸೆಪ್ಟಂಬರ್ ತಾ|| 9, ಸ|| 1909.

II ನೆ ಭಾಗ.

ಇಂಡ್ಯಾಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ಮಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ವಿದ್ಯಾಭ್ಯಾಸದ ಇಲಾಖೆ.

ಪ್ರಕಟನ ಪತ್ರಿಕೆ.

1909ನೆಯ ಇಸವಿ ಸೆಪ್ಟಂಬರು 6ನೆಯ ತಾರೀಖಿನ ಡಿ. ನಂಬರು 8.

1. 1909ನೆಯ ಇಸವಿ ಆಗಸ್ಟು 14ನೆಯ ತಾರೀಖಿನ ಡಿ. ನಂಬರು 5ನೆಯ ಪ್ರಕಟನಪತ್ರಿಕೆಯನ್ನು ಅನುಸರಿಸಿ, ಹೊಲಿಗೆಯಲ್ಲಿ ಉಪಾಧ್ಯಾಯಿ ಪ್ರಾವೀಣ್ಯ ನಿರ್ಣಾಯಕ ಪರೀಕ್ಷೆಯು ಬೆಂಗಳೂರು ಮತ್ತು ಮೈಸೂರು ಪಟ್ಟಣಗಳಲ್ಲಿ ನಡೆಯಿಸಲ್ಪಡುವುದು.

2. ಸದರಿ ಡಿ. ನಂಬರು 5ನೆಯ ಪ್ರಕಟನ ಪತ್ರಿಕೆಯ 6ನೆಯ ಆರ್ಟಿಕಲ್ 6ನೆಯ ಪ್ಯಾರಾದಲ್ಲಿ "ಕತ್ತರಿಸಿ" ಎಂಬ ಮಾತಿನ ಹಿಂದೆ "ಕೊಡಲ್ಪಡುವ ಮಾದಿರಿ ಅಥವಾ ಅಳತೆಯಂತೆ." ಎಂಬ ಮಾತುಗಳನ್ನು ಸೇರಿಸಿಕೊಳ್ಳಬೇಕು.

1909ನೆಯ ಇಸವಿ ಆಗಸ್ಟು 25ನೆಯ ತಾರೀಖಿನ ಡಿ. ನಂಬರ್ 7.

ವ್ಯವಸಾಯಾನುಭವದ ಪರೀಕ್ಷೆ.

ಕೆಳಗೆ ತಿಳಿಸಿರುವ ವ್ಯವಸಾಯಾನುಭವದ ಪರೀಕ್ಷೆಯ ನಿಯಮಗಳು 1909ನೆಯ ಇಸವಿ ನವಂಬರು ತಿಂಗಳಿಂದ ಜಾರಿಯಲ್ಲಿ ಬರತಕ್ಕದ್ದು:—

1. ವ್ಯವಸಾಯಾನುಭವ ಪರೀಕ್ಷೆಯು ಮೈಸೂರಲ್ಲಿರುವ ನಾರ್ಮಲ್ ಸ್ಕೂಲಿನಲ್ಲಿ ಪ್ರತಿ ವರ್ಷವೂ ದೇಶಭಾಷೆಯಲ್ಲಿ ನವಂಬರು ತಿಂಗಳಿನ ಕೊನೆಯ ವಾರದಲ್ಲಿ ನಡೆಯಿಸಲ್ಪಡುತ್ತದೆ.

2. ಈ ಪರೀಕ್ಷೆಯಲ್ಲಿ ಎರಡು ಭಾಗಗಳುಂಟು:—

(1) ಖರಹದ ಪರೀಕ್ಷೆ—3 ಗಂಟೆ ಕಾಲದ ಬಂದು ಪತ್ರಿಕೆಯಿಂದ ನಡೆಯುತ್ತದೆ—40 ಅಂಕಗಳು.

(2) ಮುಖತಃ ಪರೀಕ್ಷೆ ಮತ್ತು ವ್ಯಾವಹಾರಿಕಪರೀಕ್ಷೆ—60 ಅಂಕಗಳು.

3. ಮೈಸೂರು ನಾರ್ಮಲ್ ಸ್ಕೂಲಿನ ಅಪ್ಪರ್ ಸೆಕಂಡರಿ ಟ್ರೈನಿಂಗ್ ತರಗತಿಯಲ್ಲಿ ಬಂದು ವರ್ಷದ ವರೆಗೆ ವ್ಯವಸಾಯಾನುಭವದಲ್ಲಿ ಸಂಪೂರ್ಣವಾಗಿ ಶಿಕ್ಷಣವನ್ನು ಹೊಂದಿರುವ ವಿದ್ಯಾರ್ಥಿಗಳೆಲ್ಲರೂ ಈ ಪರೀಕ್ಷೆಗೆ ಸೇರಬಹುದು. ಮತ್ತು ವಿದ್ಯಾಭ್ಯಾಸದ ಇಲಾಖೆಯ ಇನ್‌ಸ್ಪೆಕ್ಟರ್ ಜನರಲ್‌ರವರು ಇತರ ಯಾವ ವಿದ್ಯಾರ್ಥಿಗಳನ್ನಾಗಲಿ ಅವರ ಸಾಮಾನ್ಯ ಮತ್ತು ಇತರ ವಿಶೇಷ ಯೋಗ್ಯತೆಗಳನ್ನು ನೋಡಿ ಒಪ್ಪಿದ ಪಕ್ಷದಲ್ಲಿ ಅವರೂ ಸೇರಬಹುದು.

4. ಪರೀಕ್ಷೆ ಯಾವ ಭಾಗಗಳಲ್ಲಿ ನಡೆಯುತ್ತದೆ ಎಂಬುವದನ್ನು ಮುಂದೆ ತಿಳಿಸಿದೆ :—

I. ವ್ಯವಸಾಯದ ಕ್ರಮಗಳು.

ಕೆಳಗೆ ಬರೆದಿರುವ ಪೈರುಗಳನ್ನು ವ್ಯವಸಾಯ ಮಾಡುವ ಕ್ರಮಗಳು :—

ಧಾನ್ಯಗಳು :—ರಾಗಿ, ಜೋಳ, ಭತ್ತ, ಮುಸುಕಿನಜೋಳ, ಗೋಧಿ ಮತ್ತು ಇತರ ಕೀಳು ಧಾನ್ಯಗಳು.

ದ್ವಿದಳಗಳು :—ತೊಗರಿ, ಅವರೆ, ಹುರಳಿ, ಕಡಲೆ, ಅಲಸಂದಿ.

ಎಣ್ಣೆಯ ಕಾಳುಗಳು :—ನೆಲಗಡಲೆ, ಹರಳು, ಎಳ್ಳು ಮತ್ತು ಉಚ್ಚೆಳ್ಳು.

ವೀವು ಪೈರುಗಳು :—ಜೋಳಿಗಳು ಮತ್ತು ಮನಿಲಸೆಣಬು.

ನಾರು ಪೈರುಗಳು :—ಹತ್ತಿ, ಸೆಣಬು, ಪುಂಡಿ.

ಕೈಗಾರಿಕೆ ಮತ್ತು ಇತರ ಪೈರುಗಳು :—ಕಬ್ಬು, ಹೊಗೇಸೊಪ್ಪು, ಆಲೂಗೆಡ್ಡೆ, ಗೆಣಸು, ಮೆಣಸಿನಕಾಯಿ, ನೀರುಳ್ಳಿ, ತೆಂಗು, ಅಡಿಕೆ, ಶುಂಠಿ, ಅರಿಸಿನ.

II. ಹುಳುಗಳ ವ್ಯಾಧಿಗಳು ಮತ್ತು ಪೈರಿನ ರೋಗಗಳು.

ಅತ್ಯಂತ ಬಳಕೆಯಾದ ಹುಳುಗಳ ಜೀವಮಾನದ ಚರಿತ್ರೆಯ ವಿಷಯವಾಗಿ ಸಾಮಾನ್ಯಾಂಕಗಳು ಮತ್ತು ಅವುಗಳ ಸ್ವಭಾವ, ಸಾಮಾನ್ಯರಚನೆ, ಮತ್ತು ಆಹಾರ. ಕೆಳಗೆ ಬರೆದಿರುವ ಏಳು ಮುಖ್ಯವಾದ ಹುಳುಗಳ ಕ್ರಮಗಳಲ್ಲಿ ಬಂದೊಂದು ಕ್ರಮದ ಹುಳುಗಳನ್ನೂ ಗುರ್ತು ಹಿಡಿಯುವುದಕ್ಕೆ ಅನುಕೂಲವಾದ ಲಕ್ಷಣಗಳು ಮತ್ತು ಪ್ರತಿ ಬಂದಕ್ಕೂ ಬಳಿಕೆಯಾದ ಉದಾಹರಣೆಗಳು :—

(1) ಆರ್ಥಪ್ಟೀರ, (2) ನ್ಯೂರಪ್ಟೀರ, (3) ಹೈಮನಾಪ್ಟೀರ, (4) ಕಾಲಿಯೂಪ್ಟೀರ, (5) ಲೆಪಿಡೋಪ್ಟೀರಾ, (6) ಹೆಮಿಪ್ಟೀರ, (7) ಡಿಪ್ಟೀರ.

ಹುಳುಗಳ ಮೂಲಕವಾಗಿಯೂ ಫಂಜೈ (Fungi) ಎಂಬ ಸೂಕ್ಷ್ಮ ಸಸಿಗಳ ಮೂಲಕವಾಗಿಯೂ ಪೈರಿಗೆ ಬರುವುದೆಂದು ತಿಳಿದಿರುವ ರೋಗಗಳು, ಮತ್ತು ಆ ವ್ಯಾಧಿಗಳು ಬಾರದಹಾಗೆ ಮಾಡತಕ್ಕ ಕ್ರಮಗಳು. ಬಂದಾಗ ಮಾಡಬೇಕಾದ ಪರಿಹಾರಗಳು. ಈ ವಿಷಯಗಳಲ್ಲಿ ತಜ್ಞಾವಾಣಿಕರ ಅಭಿಪ್ರಾಯ. ಉಪಯೋಗವಾದ ಹುಳುಗಳನ್ನೂ ಮತ್ತು ಸೂಕ್ಷ್ಮ ಸಸಿಗಳನ್ನೂ ಕೊಲ್ಲುವ ಪದಾರ್ಥಗಳು. ಅವುಗಳನ್ನು ಸಿದ್ಧಪಡಿಸುವ ವಿಧಾನ ಮತ್ತು ಅವುಗಳ ಉಪಯೋಗ.

5. ಬರಹದ ಪರೀಕ್ಷೆಯನ್ನು ಮಾಡುವುದರ ಉದ್ದೇಶವು ವಿದ್ಯಾರ್ಥಿಯ ಯೋಗ್ಯತೆಯನ್ನು ಯಾವ ಯಾವ ಭಾಗದಲ್ಲಿ ತಿಳಿಯುವದಕ್ಕೆಂದರೆ :—(1) ಪೈರುಗಳನ್ನು ಬೆಳೆಯತಕ್ಕ ವಿಧವಿಧವಾದ ಕ್ರಮಗಳು. (2) ಪೈರುಗಳಿಗೆ ಸಾಮಾನ್ಯವಾಗಿ ತಗಲುವ ಹುಳುಗಳನ್ನು ಗುರ್ತು ಹಿಡಿಯುವುದಕ್ಕೆ ಅನುಕೂಲವಾದ ಅವುಗಳ ಲಕ್ಷಣಗಳು. (3) ಪೈರಿಗೆ ತಗಲುವ ಅತ್ಯಂತ ಸಾಮಾನ್ಯವಾದ ಹುಳುಗಳ ಮತ್ತು ಇತರ ವ್ಯಾಧಿಗಳ ಸ್ವರೂಪ. ಪರೀಕ್ಷೆ ನಡೆಯುವ ವರ್ಷದಲ್ಲಿ ನಾರ್ಮಲ್ ಸ್ಕೂಲಿಗೆ ಸಂಬಂಧಪಟ್ಟ ವ್ಯವಸಾಯದ ಜಮೀನಿನಲ್ಲಿ ಬೆಳೆದ ಪೈರುಗಳ ವಿಷಯದಲ್ಲಿ ಪ್ರಶ್ನೆಗಳನ್ನು ಪತ್ರಿಕೆಯಲ್ಲಿ ಮುಖ್ಯವಾಗಿ ಕೊಡಬೇಕೆಂಬುದು ಅಭಿಪ್ರಾಯ. ಮುಖತಃ ಪರೀಕ್ಷೆ ಮತ್ತು ವ್ಯಾವಹಾರಿಕ ಪರೀಕ್ಷೆ ಇವುಗಳ ಉದ್ದೇಶವೇನೆಂದರೆ :—ಸ್ವದೇಶದ ಮತ್ತು ಅನ್ಯದೇಶದ ಯಾನಗಳನ್ನೂ, ಯಂತ್ರಗಳನ್ನೂ ಉಪಯೋಗಿಸುವುದಕ್ಕೆ ವಿದ್ಯಾರ್ಥಿಗೆ ಇರುವ ಯೋಗ್ಯತೆಯನ್ನೂ ಮತ್ತು ಮುಖ್ಯವಾದ ಕಾಳುಗಳ ಬಗೆಗಳಲ್ಲಿಯೂ ಸಾಮಾನ್ಯವಾದ ಹುಳುಗಳಲ್ಲಿಯೂ ಮತ್ತು ಆ ಹುಳುಗಳನ್ನು ಕೊಲ್ಲುವ ಪದಾರ್ಥಗಳಲ್ಲಿಯೂ ಆತನಿಗೆ ಎಷ್ಟುಮಟ್ಟಿಗೆ ಬಳಕೆಯು ಇದೆ ಎಂಬುದನ್ನು ತಿಳಿಯುವುದು.

6. ಒಟ್ಟು ವಿಷಯಕ್ಕಿರುವ ಪೂರ್ಣಾಂಕದಲ್ಲಿ 40 ಅಂಕಗಳನ್ನು ಪಡೆದರೆ ವಿನಾ ಯಾರೂ ಪರೀಕ್ಷೆಯಲ್ಲಿ ತೇರ್ಗಡೆಯಾದ ಹಾಗೆ ಎಣಿಸಲ್ಪಡುವುದಿಲ್ಲ. ಮುಖತಃ ಪರೀಕ್ಷೆ, ವ್ಯಾವಹಾರಿಕ ಪರೀಕ್ಷೆಗಳಿಗಿರುವ ಅಂಕಗಳಲ್ಲಿ ಸೇಕಡಾ 30ನ್ನು ಪಡೆಯಬೇಕು. ತೇರ್ಗಡೆಯಾದವರಲ್ಲಿ ಒಟ್ಟು ಅಂಕಸಂಖ್ಯೆಯಲ್ಲಿ ಸೇಕಡಾ 60ನ್ನು ಪಡೆದವರು ಮೊದಲನೆಯ ವರ್ಗದಲ್ಲೂ ಉಳಿದವರು ಎರಡನೆಯ ವರ್ಗದಲ್ಲಿಯೂ ಸೇರಿಸಲ್ಪಡುವರು.

7. ಈ ಪರೀಕ್ಷೆಯನ್ನು ನಡೆಯಿಸುವುದಕ್ಕೆ ತಿಳಿದವರಾದ ಇಬ್ಬರು ಪರೀಕ್ಷಕರ ಬಂದು ಸಂಘವು ಗೊತ್ತುಮಾಡಲ್ಪಡುತ್ತದೆ.

8. ಈ ಪರೀಕ್ಷೆಯಲ್ಲಿ ತೇರ್ಗಡೆಯಾದವರಿಗೆ ವಿದ್ಯಾಭ್ಯಾಸದ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್‌ರವರು ರುಜು ಮಾಡಿರುವ ಯೋಗ್ಯತಾಪತ್ರಿಕೆಯು ಕೊಡಲ್ಪಡುವುದು. ಮತ್ತು ಅಂಥವರು ಉತ್ತಮವಾದ ವ್ಯವಸಾಯ ಕ್ರಮಗಳನ್ನು ಪ್ರಕಟಿಸುವುದಕ್ಕೂ ಅಥವಾ ಸಂಸ್ಥಾನದ ಪಾಠಶಾಲೆಗಳಲ್ಲಿ ವ್ಯವಸಾಯಾನುಭವವನ್ನು ಕಲಿಸುವುದಕ್ಕೂ ಅರ್ಹರಾಗುವರು.

9. ವ್ಯವಸಾಯಾನುಭವದ ಪರೀಕ್ಷೆಗೆ ಸೇರಬೇಕೆಂಬುವರು ಮೈಸೂರು ದೇಶೀಯ ಪರೀಕ್ಷೆಗಳ ಮ್ಯಾನೇಜರಲ್ಲಿಗೆ ಆಯಾ ವರ್ಷದ ಆಗಸ್ಟು 15ನೆಯ ತಾರೀಖನ್ನು ಅತಿಕ್ರಮಿಸದೆ ತಲಪುವಂತೆ ದರಖಾಸ್ತುಗಳನ್ನು ಕಳುಹಿಸಬೇಕು.

[ಈ ವರ್ಷದಲ್ಲಿ ಮಾತ್ರ ದರಖಾಸ್ತು ಸೇರಬಹುದಾದ ಕೊನೆಯ ತಾರೀಖು ಸೆಪ್ಟೆಂಬರು 30].

10. ಈ ಪರೀಕ್ಷೆಗೆ ಸೇರಿಕೊಳ್ಳುವುದಕ್ಕೆ ಕೊಡಬೇಕಾದ ಫೀಜು 3 ರೂಪಾಯಿಗಳು.

11. ಈ ಪರೀಕ್ಷೆಯಲ್ಲಿ ತೇರ್ಗಡೆಯಾಗದವರು ಗೊತ್ತಾದ ಫೀಜನ್ನು ಕೊಟ್ಟು ಪುನಃ ಪರೀಕ್ಷೆಗೆ ಸೇರಬಹುದು.

ಹೆಚ್. ಜೆ. ಭಾಭಾ,
ಇನ್ಸ್‌ಪೆಕ್ಟರ್ ಜನರಲ್ ಆಫ್ ಎಜ್ಯುಕೇಷನ್.